# ತಹಶೀಲ್ದಾರರು ಬಳ್ಳಾರಿ ರವರ ನ್ಯಾಯಾಲಯದ ನಡುವಳಿಗಳು

| ವಾದಿಗಳು: | ಪ್ರತಿವಾದಿಗಳು: |
|---|---|
| ಶ್ರೀ ಬಸವನಗೌಡ ತಂದೆ ನಾಗನಗೌಡ | ಕಂದಾಯ ನಿರೀಕ್ಷಕರು, ಬಳ್ಳಾರಿ |

**ವಿಷಯ:**ಬಳ್ಳಾರಿ ತಾಲೂಕು ಬಳ್ಳಾರಿ ಹೋಬಳಿಯ ಹಲಕುಂದಿ ಗ್ರಾಮದ ಸರ್ವೆ ನಂ:209/ಎ ವಿಸ್ತೀರ್ಣ:6.86 ಎಕರೆ ಜಮೀನಿಗೆ ಸಂಬಂಧಿಸಿದಂತೆ ವಿಚಾರಣೆ ಕುರಿತು.

******

ಪ್ರಸ್ತಾವನೆ:

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ಬಳ್ಳಾರಿ ತಾಲೂಕು ಬಳ್ಳಾರಿ ಹೋಬಳಿಯ ಹಲಕುಂದಿ ಗ್ರಾಮದ ಸರ್ವೆ ನಂ:209/ಎ ವಿಸ್ತೀರ್ಣ:6.86 ಎಕರೆ ಜಮೀನಿನ ಹಾಲಿ ಭೂಮಾಲಿಕರಾದ ಶ್ರೀಮತಿ ಎಂ ರತ್ನಮ್ಮ ಗಂಡ ಎಂ ಬಸವನಗೌಡ ಇವರು ಪತಿಯಾದ ಶ್ರೀ ಎಂ ಬಸವನಗೌಡ ತಂದೆ ಎಂ ನಾಗನಗೌಡ ಇವರಿಗೆ ಉಪನೊಂದಣಿ ಅಧಿಕಾರಿಗಳು, ಬಳ್ಳಾರಿ ಇವರ ಸಂಖ್ಯೆ BLY-1-15875/2015-16 ದಿನಾಂಕ: 16-03-2016ರ ಪ್ರಕಾರ ದಾನಮಾಡಿರುತ್ತಾರೆ. ಅದರಂತೆ ದಾನಪಡೆದವರು ಹಕ್ಕು ಬದಲಾವಣೆಗೆ ಮನವಿಯನ್ನು ಸಲ್ಲಿಸಿರುತ್ತಾರೆ. ಅರ್ಜಿದಾರರ ಮನವಿಯಂತೆ ಕಂದಾಯ ನಿರೀಕ್ಷಕರು, ಬಳ್ಳಾರಿ ಇವರು ಗ್ರಾಮದಲ್ಲಿ ನಮೂನೆ-21ನ್ನು ಜಾರಿಮಾಡಿರುತ್ತಾರೆ ನಿಗದಿತ ಅವದಿಯಲ್ಲಿ ಯಾವುದೇ ಆಕ್ಷೇಪಣೆಗಳು ಬಂದಿರುವುದಿಲ್ಲ. ಆದರೆ ಮೊದಲು ಪತ್ನಿ ಹೆಸರಿನಲ್ಲಿ ಕ್ರಯಮಾಡಿಸಿ ಈಗ ದಾನ ಪಡೆದಿರುವುದರಿಂದ ಸದ್ರಿ ಕಡತವನ್ನು ಪರಿಶೀಲಿಸಿ ಇತ್ಯರ್ಥ ಪಡೆಸಲು ಕಾರ್ಯಾಲಯಕ್ಕೆ ಸಲ್ಲಿಸಿರುತ್ತಾರೆ.

ಈ ಪ್ರಕರಣವನ್ನು ಇತ್ಯರ್ಥ ಪಡಿಸಲು ದಿನಾಂಕ:30-05-2016ರಂದು ವಿಚಾರಣೆ ನಡೆಸಲಾಗಿ ಪ್ರಕಾರಣಕ್ಕೆ ಅರ್ಜಿದಾರರು ಹಾಜರಾಗಿರುತ್ತಾರೆ. ಸದ್ರಿ ಕಡತವನ್ನು ಪರಿಶೀಲಿಸಿ ಈಕೆಳಗಿನಂತೆ ಆದೇಶಿಸಲಾಗಿದೆ.

**-::ಆದೇಶ::-**

**ಸಂ/ಕಂ/ವಿವಾದ/ 87 /2016-17** **ದಿನಾಂಕ: 30 /5 /2016**

ಪ್ರಸ್ತಾವನೆಯಲ್ಲಿ ವಿವರಿಸಿದಂತೆ ಬಳ್ಳಾರಿ ತಾಲೂಕು ಬಳ್ಳಾರಿ ಹೋಬಳಿಯ ಹಲಕುಂದಿ ಗ್ರಾಮದ ಸರ್ವೆ ನಂ:209/ಎ ವಿಸ್ತೀರ್ಣ:6.86 ಎಕರೆ ಜಮೀನು ಉಪನೊಂದಣಿ ಅಧಿಕಾರಿಗಳು, ಬಳ್ಳಾರಿ ಇವರ ಸಂಖ್ಯೆ BLY-1-15875/2015-16 ದಿನಾಂಕ:16-03-2016ರ ಪ್ರಕಾರ ಶ್ರೀ ಎಂ.ಬಸವನಗೌಡ ತಂದೆ ನಾಗನಗೌಡ ಇವರ ಹೆಸರಿಗೆ ದಾನಪತ್ರದ ಪ್ರಕಾರ ಹಕ್ಕು ಬದಲಾವಣೆ ಮಾಡಲು ಆದೇಶಿಸಲಾಗಿದೆ.

ಈ ಆದೇಶವು ಇಂದು ದಿನಾಂಕ: 30-5-16 ರಂದು ನ್ಯಾಯಾಲಯದಲ್ಲಿ ಘೋಷಿಸಲಾಯಿತು.

ತಹಶೀಲ್ದಾರರು
ಬಳ್ಳಾರಿ.

ತಹಶೀಲ್ದಾರರು, ಬಳ್ಳಾರಿ
Tasildar, Bellary.

ಪ್ರತಿಯನ್ನು:
1.ವಾದಿಗಳು
2.ಶಿರಸ್ತೇದಾರರು ಭೂಮಿ ಗಣಿಕೀಕರಣ ಕೇಂದ್ರ ಶಾಖೆಗೆ ಸೂಕ್ತ ಕ್ರಮಕ್ಕಾಗಿ.
3.ಆದೇಶದ ಕಡತಕ್ಕೆ